ಗಾಂಧಿನಗರ ಪೋಸ್ಟ್

# ಕಾಮಿಡಿ ಒಲವಿನ ಕಾಜಲ್

**ಹಿಂದಿ, ಮರಾಠಿ, ಕನ್ನಡ, ತುಳು ಸಿನಿಮಾಗಳಲ್ಲಿ ನಟಿಸಿರುವ ಕಾಜಲ್ ಕುಂದರ್ ಮಂಗಳೂರಿನ ಚೆಲುವೆ. ನಾಟಕಗಳ ನಂಟನ್ನೂ ಬೆಸೆದುಕೊಂಡಿರುವ ಅವರದ್ದು ತಮ್ಮನ್ನು ಹೊಸ ಧಾಟಿಯ ಪಾತ್ರಗಳಲ್ಲಿ ಅನ್ವೇಷಿಸುವ ಪ್ರಯತ್ನ.**

■ **ಸುಮಲತಾ ಎನ್.**

‘ಮಾಯಾ ಕನ್ನಡಿ’ ಸಿನಿಮಾ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದ ನಟಿ ಕಾಜಲ್ ಕುಂದರ್ ಮೂಲ ಮಂಗಳೂರೇ ಆದರೂ, ಬೆಳೆದಿದ್ದು, ಓದಿದ್ದೆಲ್ಲ ಬಣ್ಣದ ಲೋಕ ಮುಂಬೈನಲ್ಲಿ.

ಶಾಲೆಗೆ ಹೋಗುವಾಗಲೇ ಟೀವಿ, ಸಿನಿಮಾಗಳಲ್ಲಿ ಬರುತ್ತಿದ್ದ ಪಾತ್ರಗಳಲ್ಲಿ ತಮ್ಮನ್ನೇ ತಾವು ಕಂಡುಕೊಳ್ಳುತ್ತಿದ್ದ, ಬೆರಗುಗೊಳ್ಳುತ್ತಿದ್ದ ಅವರಲ್ಲಿ ಕಲಾವಿದೆ ಎನ್ನಿಸಿಕೊಳ್ಳುವ ಕನಸೂ ಅದಾಗಲೇ ಚಿಗುರಿತ್ತು. ಅವರ ಆ ನಟನೆಯ ಆಸಕ್ತಿಗೆ ರೆಕ್ಕೆ ಕಟ್ಟಿದ್ದು ನಾಟಕಗಳು. ಶಾಲಾ ದಿನಗಳಲ್ಲಿ ನಾಟಕಗಳಲ್ಲಿ ಅಭಿನಯಿಸಲು ಆರಂಭಿಸಿದ ಅವರಲ್ಲಿ ನಟಿಯಾಗಬೇಕೆಂಬ ಹಂಬಲ ತೀವ್ರವಾಗಿತ್ತು. ಕಾಲೇಜು ಮೆಟ್ಟಿಲು ಹತ್ತುತ್ತಿದ್ದಂತೆ ಓದಿನ ಜೊತೆಗೆ ಬಣ್ಣದ ನಂಟೂ ಸೇರಿಕೊಂಡಿತು.

ಮನರಂಜನಾ ಕ್ಷೇತ್ರಕ್ಕೆ ಮೊದಲ ಮೆಟ್ಟಿಲೆಂಬಂತೆ ಮುಂಬೈನಲ್ಲಿ ಕೆಲವು ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುವ ಅವಕಾಶ ಕಾಜಲ್‌ಗೆ ಒಲಿದುಬಂದವು. ಜಾಹೀರಾತು ಲೋಕ ಧಾರಾವಾಹಿಗಳಿಗೆ ದಾರಿ ತೆರೆಯಿತು. ಕಿರುತೆರೆ, ಹಿಂದಿ ಸಿನಿಮಾವೊಂದರಲ್ಲಿ ನಟಿಸುವ ಅವಕಾಶವನ್ನು ಕರುಣಿಸಿತ್ತು. ಈ ಬೆನ್ನಲ್ಲೇ ಕೆಲವು ಮರಾಠಿ ಸಿನಿಮಾಗಳು ಕೂಡ ಕಾಜಲ್ ಅವರ ಪಾಲಿಗೆ ಒಲಿದುಬಂದವು. ತುಳು ಸಿನಿಮಾಗಳಲ್ಲಿ ನಟಿಸುವ ಅವಕಾಶ ಕೂಡ ಸಿಕ್ಕಿತ್ತು. ಕಂಟೆಂಟ್ ಆಧರಿತ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದ ಅವರ ಚಿತ್ತ ಕನ್ನಡ ಸಿನಿಮಾರಂಗದತ್ತಲೂ ಹೊರಳಿತ್ತು.

‘ಮಾಯಾ ಕನ್ನಡಿ’ ಎಂಬ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗದತ್ತ ಹೆಜ್ಜೆ ಇಟ್ಟ ಅವರು, ‘ಬಾಂಡ್ ರವಿ’, ‘ಕೆಟಿಎಂ’ ಸಿನಿಮಾದಲ್ಲಿ ನಟಿಸಿದರು. ಈಚೆಗೆ ವಿನಯ್ ರಾಜಕುಮಾರ್ ಅವರೊಂದಿಗೆ ‘ಪೆಪೆ’ ಸಿನಿಮಾದಲ್ಲಿ ನಟಿಸಿದ್ದು ಅವರ ಆತ್ಮವಿಶ್ವಾಸವನ್ನು ಇನ್ನಷ್ಟು ಗಟ್ಟಿಗೊಳಿಸಿದೆ. ಕನ್ನಡದಲ್ಲಿ ಅತ್ಯುತ್ತಮ ಸಿನಿಮಾಗಳನ್ನು ನೀಡಬೇಕೆಂಬ ಹುರುಪನ್ನೂ ತುಂಬಿದೆ.

‘‘ಪೆಪೆ ನನ್ನನ್ನು ನಾನು ನಿರೂಪಿಸಿಕೊಳ್ಳಲು ಉತ್ತಮ ಅವಕಾಶವಾಯಿತು. ಸಿನಿಮಾಗೆ ಮಿಶ್ರ ಪ್ರತಿಕ್ರಿಯೆ ಬಂತು. ಆದರೆ ಒಂದು ಪಾತ್ರವಾಗಿ ನನ್ನ ಬಗ್ಗೆ ತುಂಬಾ ಜನ ಮೆಚ್ಚುಗೆ ವ್ಯಕ್ತಪಡಿಸಿದರು. ನನ್ನ ಪಾತ್ರಕ್ಕೆ ನ್ಯಾಯ ಒದಗಿಸಿದ್ದೇನೆ ಎಂದು ಹಿರಿಯ ಕಲಾವಿದರು ಮೆಚ್ಚಿಕೊಂಡಿದ್ದು ನನಗೆ ಬಹಳ ಖುಷಿ ನೀಡಿತು. ನನಗೂ ಸಾಮರ್ಥ್ಯ ಇದೆ ಎಂದು ತೋರಲು ತುಂಬಾ ಸಮಯದಿಂದ ಪ್ರಯತ್ನಿಸುತ್ತಿದ್ದೆ. ಯಾವುದೇ ಕಲಾವಿದರಿಗೆ ತಮ್ಮ ಸಾಮರ್ಥ್ಯ ನಿರೂಪಣೆಗೆ ತಕ್ಕ ಪಾತ್ರಗಳು ಸಿಗುವುದು ಸುಲಭವಲ್ಲ. ‘ಪೆಪೆ’ ನನಗೆ ಅಂಥ ಪಾತ್ರವನ್ನು ನೀಡಿತು’’ ಎಂದು ಸ್ಮರಿಸುತ್ತಾರೆ ಕಾಜಲ್.

ಸದ್ಯ ಕಿರಣ್ ರಾಜ್ ಹಾಗೂ ಕಾಜಲ್ ಕುಂದರ್ ನಟನೆಯ ‘ಮೇಘ’ ಸಿನಿಮಾ ಕೂಡ ಬಿಡುಗಡೆಯ ಅಂಚಿನಲ್ಲಿದ್ದು, ಕಾಲೇಜು ಹುಡುಗಿಯ ಪಾತ್ರದಲ್ಲಿ ಕಾಜಲ್ ಕಾಣಿಸಿಕೊಂಡಿದ್ದಾರೆ.

ತಮ್ಮ ನಿರೀಕ್ಷೆಯ ಪಾತ್ರಗಳ ಕುರಿತೂ ಮಾತು ಹಂಚಿಕೊಂಡಿರುವ ಅವರು, ‘ಕಲಾವಿದೆಯಾಗಿ ಎಲ್ಲ ರೀತಿಯ ಪಾತ್ರಗಳನ್ನು ನಿರ್ವಹಿಸಬೇಕು. ಆಗಲೇ ನಮ್ಮ ವರ್ಸಟಾಲಿಟಿಯನ್ನೂ ತೋರಲು ಸಾಧ್ಯ. ಆದರೆ ಪ್ರಸ್ತುತ ಕಾಮಿಡಿ, ಅದರಲ್ಲೂ ಫ್ಯಾಮಿಲಿ ರೊಮ್ಯಾಂಟಿಕ್ ಕಾಮಿಡಿ ಸಿನಿಮಾಗಳು ಕಡಿಮೆಯಾಗಿವೆ. ಈಗ ಸಿನಿಮಾರಂಗದಲ್ಲಿ ಸಸ್ಪೆನ್ಸ್, ಆ್ಯಕ್ಷನ್, ಥ್ರಿಲ್ಲರ್ ಕಥೆಗಳ ಗಂಭೀರ ಸಿನಿಮಾಗಳೇ ತುಂಬಿವೆ. ಕೌಟುಂಬಿಕ ಸಿನಿಮಾಗಳು, ಕೌಟುಂಬಿಕ ಹಾಸ್ಯ ಸಿನಿಮಾಗಳ ಅಗತ್ಯವಿದೆ. ಇಂಥ ಸಿನಿಮಾಗಳು ಬಂದರೆ ಜನ ಕೂಡ ಥಿಯೇಟರ್‌ಗಳಿಗೆ ಬರುತ್ತಾರೆ ಎಂಬುದು ನನ್ನ ನಂಬಿಕೆ. ಹೀಗಾಗಿ ನನಗೆ ರಾಮ್‌ಕಾಮ್ ಸಿನಿಮಾಗಳ ಭಾಗವಾಗಬೇಕೆಂಬ ಆಸೆ’ ಎನ್ನುತ್ತಾರೆ ಕಾಜಲ್.

‘ಮೇಘ’ ಸಿನಿಮಾದ ಜೊತೆಜೊತೆಗೆ ಮತ್ತೊಂದು ಸಿನಿಮಾ ಚಿತ್ರೀಕರಣವೂ ಮುಗಿದಿದ್ದು, ಆ ಸಿನಿಮಾ ಕೂಡ ಬಿಡುಗಡೆ ಹೊಸ್ತಿಲಿನಲ್ಲಿದೆ. ಸದ್ಯ ಸಾಗಬೇಕಾದ ದಾರಿ ದೂರವಿದ್ದು, ಒಳ್ಳೆಯ ಕಥೆ, ಚಿತ್ರತಂಡಗಳೊಂದಿಗೆ ಕೆಲಸ ಮಾಡುವ ಅವಕಾಶಗಳನ್ನು ಎದುರು ನೋಡುತ್ತಿದ್ದಾರೆ. ■

